# ಇನ್ನಷ್ಟು ಜ಼ೆನ್ ಕಥೆಗಳು

ಕೆ.ಬಿ. ಪ್ರಭುಪ್ರಸಾದ್

ಜ಼ೆನ್ ಕಥೆಗಳು ವಿಚಾರಕ್ಕೆ ನಮ್ಮನ್ನು ಪ್ರಚೋದಿಸುವ ಜ್ಞಾನದ ಕಿಡಿಗಳು. ಧ್ಯಾನ, ಚಿಂತನೆ, ವಿಶ್ಲೇಷಣೆ –ಒಟ್ಟಾರೆ ಸಾಧನೆಯಿಂದ ಮಾತ್ರ ತಮ್ಮ ರಹಸ್ಯವನ್ನು ಅನಾವರಣಗೊಳಿಸಿ ಅರಿವಿನ ಅರುಣೋದಯವನ್ನುಂಟು ಮಾಡುವ ನುಡಿಮುತ್ತುಗಳು. ಅಂಥಹವು ಹಲವನ್ನು ನಾವೀಗಾಗಲೇ ಪ್ರಕಟಿಸಿದ್ದೇವೆ. ಇದಕ್ಕೆ ನಮ್ಮ ಸಹಕಾರಿಗಳಾಗಿ ಈ ಕಥೆಗಳನ್ನು ಅನುವಾದ ಮಾಡಿಕೊಡುತ್ತಿರುವವರು ಕನ್ನಡದ ಹೆಸರಾಂತ ಸಾಹಿತಿಗಳಾದ ಶ್ರೀ ಕೆ.ಬಿ. ಪ್ರಭುಪ್ರಸಾದ್ ಅವರು.

"ಎಲ್ಲಿ ಈಚೆಗೆ ನಿಮ್ಮ ಜ಼ೆನ್ ಕತೆಗಳು ಪತ್ರಿಕೇಲಿ ಬರಲೇ ಇಲ್ಲ?" ಎಂದು ಕೇಳಿದರು ವಿವೇಕಪ್ರಭದ ಓದುಗರೊಬ್ಬರು. "ಜ಼ೆನ್ ಕತೆಗಳು ಒಟ್ಟು ಎಷ್ಟಿವೆ?" ಎಂದರು ಅವರ ಸ್ನೇಹಿತರು. ಅದಕ್ಕೆ ನಮ್ರವಾಗಿ ಉತ್ತರಿಸಿದೆ, "ಜ಼ೆನ್ ಕತೆಗಳು ಎಷ್ಟೋ ಇವೆ. ಅವುಗಳಲ್ಲಿ ಬಹು ಪಾಲು ಪ್ರಕಟವಾಗಿವೆ. ನಮಗೆ ದೊರಕುವುದು ಇಂಗ್ಲಿಷ್ ಆವೃತ್ತಿಗಳು ಮಾತ್ರ, ಎಷ್ಟು ಎಂಬ ಎಣಿಕೆ ಮಾಡಹೋಗದೆ ಇರುಳ ನಭೋಮಂಡಲದಲ್ಲಿ ಕಂಡಷ್ಟು ನಕ್ಷತ್ರಗಳ ಚೆಲುವನ್ನು ಕಣ್ಣಿಗೆ––ಹೃದಯಕ್ಕೆ ತುಂಬಿಕೊಳ್ಳುತ್ತೇವೆ. ಹಾಗೆಯೆ ಸಿಕ್ಕಷ್ಟು ಜ಼ೆನ್ ಕತೆಗಳ ಬೆರಗನ್ನು, ಧ್ವನಿಯನ್ನು ಗ್ರಹಿಸಬೇಕು. ಚಿಂತನೆಯ ಚಕ್ರಕ್ಕೆ ಹಾಕಿ ರಸವನ್ನು ಹೀರಬೇಕು. ಮತ್ತೆ ಮತ್ತೆ ಮೆಲಕು ಹಾಕಿ ಸವಿಯಬೇಕು. ಝಗ್ಗೆಂದು ಬೆಳಕಾದಾಗ ಬುದ್ಧಿಗೂ ಮೀರಿದ ಅಂತಃಸ್ಫುರಣೆ ಹೊಳೆಯುತ್ತದೆ, ಕಾರ್ಯತತ್ಪರವಾಗುತ್ತದೆ, ಜ಼ೆನ್ ಸ್ಥಿತಿಯ ಅನುಭವವಾಗುತ್ತದೆ.

"ಪ್ರತಿ ತಿಂಗಳೂ ಹೊಸ ಹೊಸ ಜ಼ೆನ್ ಕತೆಗಳನ್ನು ಓದುವುದಕ್ಕಿಂತ, ಆಗೊಮ್ಮೆ ಈಗೊಮ್ಮೆ ಅಪರೂಪಕ್ಕೆ ಒಂದೆರಡನ್ನು ಮಾತ್ರ ಓದಿ – ನಿಧಾನವಾಗಿ ಅವುಗಳನ್ನೇ ಕುರಿತು ಆಲೋಚಿಸುತ್ತ, ಚಿಂತನೆ ಮಾಡುತ್ತ, ಅನುಭವಿಸುವುದು ವಿಹಿತ" ಎಂದೆ ನಾನು.

ಚರ್ಚೆ ಸಾಕು. ಇನ್ನೊಂದೆರಡು ಕತೆಗಳನ್ನೀಗ ಮುಂದಿಡುತ್ತೇನೆ. ಆಸಕ್ತ ಓದುಗರ ಮನ ತಣಿಯಲಿ.

## ೧. ಜ್ಞಾನದ ದಾರಿ

ಕುತೂಹಲಿಯಾದ ಭಿಕ್ಷುವೊಬ್ಬ ಜ಼ೆನ್ ಗುರುವನ್ನು ಕೇಳಿದ: "ಜ್ಞಾನಕ್ಕೆ ದಾರಿ ಯಾವುದು ಗುರುಗಳೆ?"

"ನಿನ್ನ ಕಣ್ಣೆದುರಿಗೇ ಅದು ಇದೆಯಲ್ಲಾ" ಎಂದರು ಗುರುಗಳು.

"ನಾನೇ ಅದನ್ನು ನೋಡಲಾರೆನಲ್ಲ! ಏಕೆ?"

"ಏಕೆಂದರೆ, ನೀನು ಬರಿ ನಿನ್ನ ಕುರಿತು ಮಾತ್ರ ಯೋಚಿಸುತ್ತಿರುವೆ."

"ನಿಮಗೆ ಹೇಗೆ? ಅದು ನಿಮಗಾದರೂ ಕಾಣಿಸುತ್ತಿದೆಯೇ?"

"ನನಗೆ ಕಾಣುತ್ತಿಲ್ಲ, ನಿಮಗೆ ಕಾಣುತ್ತಿದೆಯೇ – ಇತ್ಯಾದಿ ಮಾತುಗಳೇಕೆ? ನನಗೆ–ನಿನಗೆ ಎಂಬ ದ್ವಂದ್ವ ನಿನ್ನ ಮನಸ್ಸಿನಲ್ಲಿರುವವರೆಗೂ ನಿನ್ನ ಕಣ್ಣು ಕುರುಡಾಗಿರುತ್ತದೆ" ಎಂದರು ಗುರುಗಳು.

"ನಾನು–ನೀನು ಎಂಬುದಿಲ್ಲದಿದ್ದರೆ ಕಾಣುತ್ತದೆಯೆ?"

**"ನಾನು–ನೀನು ಎಂಬುದೇ ಇಲ್ಲದಿದ್ದಾಗ, ಅದನ್ನು ಕಾಣಬೇಕು ಎಂದು ತಾನೆ ಎನ್ನುವವರಾರು?"**

## ೨. ಅರ್ಥವಾದರೆ ಸಾಕೆ?

ಡೊಕೊ ಎಂಬ ವಿದ್ಯಾರ್ಥಿ ಜ಼ೆನ್ ಗುರುವೊಬ್ಬನ ಬಳಿ ಬಂದು ಕೇಳಿದ: "ಸತ್ಯವನ್ನು ಹುಡುಕುತ್ತಿದ್ದೇನೆ. ಯಾವ ರೀತಿ ಮನಸ್ಸನ್ನು ಹದಗೊಳಿಸಬೇಕು? ಹೇಗೆ ಮಾಡಿದರೆ ಸತ್ಯದರ್ಶನವಾಗುತ್ತದೆ? ದಯಮಾಡಿ ತಿಳಿಸಿ ಗುರುಗಳೆ." "ಮನಸ್ಸು ಎಂಬುದೇ ಇಲ್ಲ. ಇನ್ನು ಅದನ್ನು ಹದಗೊಳಿಸುವುದೇನು ಬಂತು? ಸತ್ಯ ಎಂಬುದೇ ಇಲ್ಲ! ಇನ್ನು ಅದನ್ನು ಹುಡುಕುವ ಮಾತೆಲ್ಲಿ? ಅದಕ್ಕಾಗಿ ಮನಸ್ಸನ್ನು ಸಿದ್ಧಗೊಳಿಸುವ ಮಾತಾದರೂ ಎಲ್ಲಿಯದು?" ಎಂದುಬಿಟ್ಟರು ಗುರು.

**ಡೊಕೊ:** ಹಾಗಾದರೆ ಇಷ್ಟೊಂದು ಜನ ಭಿಕ್ಷುಗಳು ನಿಮ್ಮನ್ನು ಸುತ್ತುವರಿದು ನಿತ್ಯವೂ ಕುಳಿತುಕೊಳ್ಳುತ್ತಾರೆ ಏಕೆ? ಜ಼ೆನ್ ಧರ್ಮವನ್ನು ಅಧ್ಯಯನ ಮಾಡಿ ಅದರ ಮಾರ್ಗದಲ್ಲಿ ಏಕೆ ನಡೆಯುತ್ತಾರೆ? ಈ ಸಾಧನೆ ಎಲ್ಲ ಏತಕ್ಕಾಗಿ?"

**ಗುರು:** ಒಂದು ಅಂಗುಲ ಜಾಗ ಸಹ ಇಲ್ಲದ ಈ ಸ್ಥಳದಲ್ಲಿ ಭಿಕ್ಷುಗಳು ಹೇಗೆ ತಾನೇ ಸೇರುತ್ತಾರೆ? ಮಾತೇ ಆಡದ ನಾನು ಅವರಿಗೆ ಬೋಧಿಸುವುದೆಲ್ಲಿ?

**ಡೊಕೊ:** ಛೇ, ಛೇ ! ನೀವು ಹೀಗೆ ಸುಳ್ಳು ಹೇಳಬಹುದೆ?

**ಗುರು:** ಮಾತೇ ಆಡದ ನಾನು ಎಂದು ಹೇಳಿದೆನಲ್ಲ. ಮಾತೇ ಆಡದವನು ಸುಳ್ಳು ಹೇಳಲು ಹೇಗೆ ಸಾಧ್ಯ?

**ಡೊಕೊ:** ನೀವು ಹೇಳುವುದು ಅರ್ಥವೇ ಆಗುತ್ತಿಲ್ಲ! ನಿಮ್ಮನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ.

**ಗುರು: ನಿನಗೇ ಏನು, ನನ್ನನ್ನು ಅರ್ಥ ಮಾಡಿಕೊಳ್ಳಲು ನನಗೇ ಸಾಧ್ಯವಾಗಿಲ್ಲ!**

## ೩. ಸಂತೋಷದ ಒಳದನಿ

ಬಾಂಕೆ ಎಂಬ ಜ಼ೆನ್ ಗುರು ತೀರಿಹೋದ ಮೇಲೆ ಆತನ ಆಶ್ರಮದ ಬಳಿ ಬಹು ಕಾಲದಿಂದ ವಾಸವಾಗಿದ್ದ ಕುರುಡನೊಬ್ಬ ತನ್ನ ಮಿತ್ರನಿಗೆ ಹೇಳಿದ.

"ನಾನು ಕುರುಡನಾಗಿರುವುದರಿಂದ, ಯಾರಾದರೂ ಮಾತಾಡಿದಾಗ, ಅವರ ಮುಖದ ಮೇಲೆ ವ್ಯಕ್ತವಾಗುವ ಭಾವ ನನಗೆ ಕಾಣುವುದಿಲ್ಲ. ಆದರೆ ಅವರ ಧ್ವನಿಯಲ್ಲೇ ಅವರ ಅಂತರಂಗದ ಭಾವವನ್ನು ತಿಳಿಯಬಲ್ಲೆ.

"ಸಾಮಾನ್ಯವಾಗಿ ಯಾರಾದರೂ ಇನ್ನೊಬ್ಬರ ಯಶಸ್ಸನ್ನೋ ಸುಖ ಸಂತೋಷಗಳನ್ನೋ ಕಂಡು ಅಭಿನಂದಿಸಿ, ತಮಗೂ ಬಹಳ ಸಂತೋಷವಾಗಿದೆ ಎಂದು ಹೇಳಿದಾಗ, ಅವರ ಅಂತ ರಂಗದೊಳಗಿನ ಸೂಕ್ಷ್ಮವಾದ ಅಸೂಯೆಯ ದನಿ ನನಗೆ ಕೇಳಿಸುತ್ತದೆ. ಹಾಗೆಯೆ ಮತ್ತೊಬ್ಬರ ದುಃಖ-ದೌರ್ಭಾಗ್ಯಗಳ ಸಂದರ್ಭದಲ್ಲಿ ಸಹಾನುಭೂತಿ ತೋರಿ ಸಂತಾಪದ ನುಡಿ ಗಳನ್ನಾಡಿದಾಗ, ಅವರ ಮನದೊಳಗೆ ನಿಜವಾಗಿಯೂ ಇರುವ ಏನೋ ಒಂದು ರಹಸ್ಯ ಸಂತೋಷ-ಸಂತೃಪ್ತಿಗಳ ಧ್ವನಿಯೂ ಕೇಳಿಸುತ್ತದೆ. ಸಂತಾಪ ಸೂಚನೆ ಕೇವಲ ತೋರಿಕೆಯದು, ಒಳಗೊಳಗೇ ನಿಜಕ್ಕೂ ಖುಷಿಯಾಗಿದೆ, ಆಗಬೇಕಾದ ಏನೋ ಸ್ವಂತದ ಲಾಭಖಚಿತವಾದ ಭಾವ ಇದೆ- ಎಂಬೀ ಧ್ವನಿಗಳು ಕೇಳುವುವು.

**"ಈ ಬಗೆಯ ನನ್ನೆಲ್ಲ ಅನುಭವಗಳಿಂದ ಹೇಳಬಲ್ಲೆ – ಬಾಂಕೆ ಗುರುವಿನದು ತ್ರಿಕರಣ ಶುದ್ಧ ವ್ಯಕ್ತಿತ್ವ. ಆತನ ಒಳಗೂ ಹೊರಗೂ ಒಂದೇ ಧ್ವನಿ ಕೇಳುತ್ತಿತ್ತು. ಆತ ತನ್ನ ಸಂತೋಷ ವನ್ನು ಮಾತಿನಲ್ಲಿ ವ್ಯಕ್ತಪಡಿಸಿದಾಗ ಆತನ ಹೃದಯದಲ್ಲೂ ಸಂತೋಷವೇ ತುಂಬಿರುವ ಧ್ವನಿ ಕೇಳಿಸುತ್ತಿತ್ತು. ಆತ ತನ್ನ ದುಃಖವನ್ನೋ ನೋವನ್ನೋ ಪ್ರಕಟಗೊಳಿಸಿದಾಗ ಆತನ ಒಳಗಿನ ಹೃದಯದ ಸಂಕಟದ ಧ್ವನಿಯೂ ಕೇಳುತ್ತಿತ್ತು.**

## ಹಾರುವ ಹಕ್ಕಿಗಳು ಕಲಿಸುವ ಪಾಠಗಳು

### ಮೊದಲನೆಯ ಪಾಠ:

**ಹ**ಕ್ಕಿಗಳು ಗುಂಪಿನಲ್ಲಿ ಹಾರುವಾಗ V ಆಕಾರದಲ್ಲಿ ಹಾರುವುದನ್ನು ನೀವು ಗಮನಿಸಿರಬೇಕು. ಮುಂದಿರುವ ಹಕ್ಕಿಗಳು ತಮ್ಮ ರೆಕ್ಕೆಗಳ ಬಡಿತದಿಂದ ಎದರು ಗಾಳಿಯ ವೇಗವನ್ನು ತಡೆಯುತ್ತವೆ. ಇದರಿಂದ ಇತರ ಹಕ್ಕಿಗಳು ಕಡಿಮೆ ಶ್ರಮದಿಂದ ವೇಗವಾಗಿ ಹಾರಬಲ್ಲವು. ಒಂಟಿಯಾಗಿ ಹಾರಿದರೆ ಹೆಚ್ಚು ಒತ್ತಡವನ್ನು ಹಕ್ಕಿಯು ಎದುರಿಸಬೇಕಾಗಿತ್ತದೆ. **ಅಂತೆಯೇ ಒಂದೇ ಗುರಿಯನ್ನು ಸಾಧಿಸಲು ಪ್ರಯತ್ನಿಸುವ ಒಂದು ಗುಂಪಿನ ಎಲ್ಲ ಸದಸ್ಯರೂ ಪರಸ್ಪರ ಸಹಕರಿಸಿದರೆ ವೇಗವಾಗಿ ಗುರಿಯನ್ನು ಸೇರಬಹುದು, ಶ್ರಮವೂ ಕಡಿಮೆ. ಸಮಾಜದ ಹಿತಕ್ಕೆ ಇದೇ ಉತ್ತಮ ಮಾರ್ಗ.**

### ಎರಡನೆಯ ಪಾಠ:

**ಹಾ**ರುತ್ತಿರುವ ಹಕ್ಕಿಗೆ ಸುಸ್ತಾಗಿ, ಹಾರುತ್ತಿರುವ ವಿನ್ಯಾಸದಿಂದ ದೂರ ಸರಿದಾಗ ಅದರ ಶ್ರಮ ಮತ್ತಷ್ಟು ಹೆಚ್ಚಾಗುತ್ತದೆ. ಕೂಡಲೇ ಉಳಿದ ಹಕ್ಕಿಗಳು ತಮ್ಮ ವೇಗವನ್ನು ಕಡಿಮೆಗೊಳಿಸಿ ಅದು ಮತ್ತೆ ಸೇರಿಕೊಳ್ಳುವಂತೆ ಮಾಡುತ್ತವೆ. **ಪರಸ್ಪರ ಸಹಕಾರ, ಕಾಳಜಿಯಿಂದ ಮಾತ್ರ ಎಲ್ಲರ ಪ್ರಗತಿ ಸಾಧ್ಯ ಎನ್ನುವುದನ್ನು ಇದು ನಮಗೆ ತಿಳಿಸಿಕೊಡುತ್ತದೆ.**

### ಮೂರನೆಯ ಪಾಠ:

**ಮು**ಂದಿರುವ ಹಕ್ಕಿ ದಣಿದಾಗ ಹಿಂದಿರುವ ಹಕ್ಕಿಯು ಅದರ ಸ್ಥಾನವನ್ನು ತಾನು ತೆಗೆದುಕೊಳ್ಳುತ್ತದೆ. ದಣಿದ ಹಕ್ಕಿ ಚೇತರಿಸಿಕೊಳ್ಳುತ್ತದೆ. ಹಾಗೆಯೇ, ಎಲ್ಲ ಕೆಲಸಗಳನ್ನೂ ಮುಖಂಡನೇ ಮಾಡಲಿ ಎಂದು ಉಳಿದ ಸದಸ್ಯರು ಭಾವಿಸಿದರೆ ಅದು ಪ್ರಗತಿಗೆ ಮಾರಕ. ತಾನೇ ಎಲ್ಲವನ್ನೂ ಮಾಡಬೇಕು ಎಂದು ಭಾವಿಸುವ ಮುಖಂಡನು ಕೂಡ ಹೆಚ್ಚು ಸಾಧಿಸಲಾರ. **ಅಂತೆಯೇ ಸದಸ್ಯರ ಮೇಲೆ ಎಲ್ಲ ಭಾರವನ್ನೂ ಹಾಕಿ, ಸೋಮಾರಿಯಾಗಿ ಉಳಿಯುವ ಮುಖಂಡನೂ ನಿಷ್ಪ್ರಯೋಜಕ.**

### ನಾಲ್ಕನೆಯ ಪಾಠ:

**ಹಾ**ರುವ ಹಕ್ಕಿಗಳು ಸತತವಾಗಿ ತಮ್ಮತಮ್ಮಲ್ಲಿ ವಟಗುಟ್ಟುತ್ತಿರುತ್ತವೆ. ಇದರಿಂದ ಎಲ್ಲ ಸದಸ್ಯರಿಗೂ ಪ್ರೋತ್ಸಾಹ ದೊರೆತಂತಾಗಿ ಗುಂಪು ಒಂದಾಗಿ ಉಳಿಯುತ್ತದೆ. **ಹೀಗೆಯೇ, ಸದಸ್ಯರನ್ನು ಪ್ರೋತ್ಸಾಹಿಸುವುದು, ಮುಕ್ತವಾಗಿ ಚರ್ಚೆ ಮಾಡುವುದು, ಗುಂಪಿನ ಸಾಮರಸ್ಯಕ್ಕೆ ಪೂರಕ.**

### ಐದನೆಯ ಪಾಠ:

**ಒ**ಂದು ಹಕ್ಕಿಗೆ ಏಟಾಗಿ ಬೀಳಲು ಪ್ರಾರಂಭಿಸಿದರೆ, ಗುಂಪಿನಿಂದ ಎರಡು ಹಕ್ಕಿಗಳು ಅದರೊಂದಿಗೆ ಇಳಿದು ಅದರ ಶುಶ್ರೂಷೆ ಮಾಡುತ್ತವೆ. ಅದು ಸತ್ತರೆ ಅದನ್ನು ಬಿಟ್ಟು ಮತ್ತೆ ಹಾರುತ್ತವೆ ಅಥವಾ ಚೇತರಿಸಿಕೊಂಡರೆ ಮತ್ತೆ ಇನ್ನೊಂದು ಗುಂಪಿನ ಜೊತೆ ಹಾರುತ್ತವೆ. **ಆದ್ದರಿಂದ ಕಷ್ಟದಲ್ಲಿರುವವರ ಬಗ್ಗೆ ಅನುಕಂಪ, ಪ್ರೀತಿ** —ಇವೇ ಸಮಾಜವನ್ನು ಹಿಡಿದಿಡುವ ಸೂತ್ರಗಳು.